**ಅ. ದಾ. ಸಂ. ಃ 269 / 2010**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 21-03-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- 1 ನೇ ಪ್ರತಿವಾದಿಯ ಪರ ಶ್ರೀ. ಎಂ.ಎನ್. ವಕೀಲರಿಂದ ಃ-**

ಸಾಕ್ಷಿಗೆ ಈ ಹಂತದಲ್ಲಿ ಚುನಾವಣಾ ಗುರುತಿನ ಚೀಟಿಯನ್ನು ತೋರಿಸಿದ್ದು, ಸದರಿಯು ನಿಮ್ಮ ತಂದೆಯದ್ದು ಎಂದರೆ ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ **ಚುನಾವಣಾ ಗುರುತಿನ ಚೀಟಿಯನ್ನು ನಿಡಿ-01** ಎಂದು ಗುರುತಿಸಲಾಯಿತು. ನಿಡಿ-01 ರ ದಾಖಲೆಯು ಗವಿನಾಗಮಂಗಲ ಗ್ರಾಮಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ನನ್ನ ತಂದೆಯು ಗವಿನಾಗಮಂಗಲದಲ್ಲಿ ಮತ ಚಲಾಯಿಸುತ್ತಿದ್ದರು ಎಂದರೆ ಸರಿ. ಸದರಿಯವರು ಅಲ್ಲಿಯೇ ವಾಸಿಸುತ್ತಿದ್ದರು ಎಂದರೆ ಸಾಕ್ಷಿಯು ಎಲ್ಲಾ ಮಕ್ಕಳ ಮನೆಯಲ್ಲಿ ವಾಸಿಸುತ್ತಿದ್ದರು ಎನ್ನುತ್ತಾರೆ. ನಿಪಿ-10 ಕ್ಕೆ ಮಾಹಿತಿ ನೀಡಿ ಬರೆಯಿಸಿದವರು ನಾನೇ ಎಂದರೆ ಸರಿ. ಪಡಿತರ ಚೀಟಿಯಲ್ಲಿ ಹೆಚ್ಚು ಜನರನ್ನು ತೋರಿಸಿದ್ದಲ್ಲಿ, ಹೆಚ್ಚಿನ ಪಡಿತರ ನೀಡುತ್ತಿದ್ದರು ಎಂದರೆ ಸರಿಯಲ್ಲ.

2. ನನ್ನ ತಂದೆಯ ಪ್ರತ್ಯೇಕ ಪಡಿತರ ಚೀಟಿ ಗವಿನಾಗಮಂಗದಲ್ಲಿ ಇತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಇರಬಹುದು ನಾನು ನೋಡಿಲ್ಲ ಎನ್ನುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದು, ಆದರೆ ಹೆಚ್ಚಿನ ಪಡಿತರ ಪಡೆಯಬೇಕೆಂದು ನಿಪಿ-10 ಕ್ಕೆ ನಾನು ಮಾಹಿತಿ ನೀಡಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ರ ಆಸ್ಪತ್ರೆ ಬಿಲ್ ದಿನಾಂಕಃ 05-03-2010, 23-03-2010 ರಲ್ಲಿ ಸದರಿ ಬಿಲ್ಲುಗಳನ್ನು ರಂಗಯ್ಯನವರೇ ಪಾವತಿಸಿರುವ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನಿಪಿ-12 ದಾವ ಸ್ವತ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿ. ನಿಪಿ-13 ಕೂಡ ದಾವ ಸ್ವತ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿ. ನಿಪಿ-14 ರಲ್ಲಿ ದಾವ ಸ್ವತ್ತು ನನ್ನ ಭಾಗಕ್ಕೆ ಬಂದಿದೆ ಎಂದು ತೋರಿಸಿಲ್ಲ ಎಂದರೆ ಸರಿ. ನಿಪಿ-15 ದಾವ ಸ್ವತ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿ. ನಿಪಿ-16 ರಿಂದ 19 ರ ಆಸ್ಪತ್ರೆಯ ಬಿಲ್ಲುಗಳು ರಂಗಯ್ಯನವರ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ-20 ರಿಂದ 23 ರ ದಾಖಲಾತಿಗಳು ನನ್ನ ಹೆಂಡತಿಯು ಸಾಲ ಮಾಡಿದ ದಾಖಲೆಗಳಾಗಿವೆ ಎಂದರೆ ಸರಿ.

3.  ನಿಪಿ-24 ರಲ್ಲಿ ಯಾವುದೇ ಸಹಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿಯು ಕಂಪ್ಯೂಟರ್ ಜನರೇಟ್ ನಿಂದ ಪಡೆದಿದ್ದು, ಸಹಿ ಇರುವುದಿಲ್ಲ ಎನ್ನುತ್ತಾರೆ. ಸದರಿಯವರು ದೃಢೀಕೃತ ಪ್ರತಿ ಕೇಳಿದ್ದಲ್ಲಿ ಸಹಿ ಮತ್ತು ಸೀಲನ್ನು ಹಾಕಿ ಕೊಡುತ್ತಾರೆಂದರೆ ಸರಿ, ಆದ್ದರಿಂದ ನಿಪಿ-24 ನ್ನು ನಾವೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.  ನಿಪಿ-25 ಮುನಿಸ್ವಾಮಿ ರವರಿಗೆ ಬರೆದ ಪತ್ರವಾಗಿದೆ ಎಂದರೆ ಸರಿ.  ನಿಪಿ-26 ರ ಕೂಡ ಸದರಿ ಮುನಿಸ್ವಾಮಿ ರವರಿಗೆ ಸಂಬಂಧಿಸಿದೆ ಎಂದರೆ ಸರಿ.  ನಿಪಿ-27 ರ ನೋಟಿಸಿಗೆ ಸಂಬಂಧಿಸಿದಂತೆ ಪ್ರತಿವಾದಿ 1 ರವರು ಸಾಲ ತೀರುವಳಿ ಮಾಡಿರುವ ದಾಖಲೆಯಾಗಿದೆ ಎಂದು ತೋರಿಸಿದ್ದು, ಸಾಕ್ಷಿಯು ಸಮ್ಮತಿಸಿದ್ದು, ಸದರಿ **ಸಾಲ ತೀರುವಳಿ ಪತ್ರ ಮತ್ತು ರಸೀದಿಯನ್ನು ನಿಡಿ-02 ಮತ್ತು ನಿಡಿ-03** ಎಂದು ಗುರುತಿಸಲಾಯಿತು.  ನಿಪಿ-28 ದಾವ ಸ್ವತ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿ.  ನಿಪಿ-21 ಟಿ ಸುರೇಶ್ ಮತ್ತು ಅರಿಣಿ ರವರಿಗೆ ಸಂಬಂಧಿಸಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿಯವರು ಸ್ಯೂರಿಟಿದಾರರಾಗಿರುತ್ತಾರೆ ಎನ್ನುತ್ತಾರೆ.  ನನಗೆ ದಾವ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ 2 ರವರ ಪರ ವಕೀಲರು ಪ್ರತಿವಾದಿ 1 ರವರ ವಕೀಲರು ಯತವತ್ತಾಗಿ ಅಳವಡಿಸಿಕೊಳ್ಳುವಂತೆ ಕೋರಿದ್ದು, ಸದರಿ ಪಾಟೀ ಸವಾಲನ್ನು ಯತವತ್ತಾಗಿ ಪ್ರತಿವಾದಿ 1 ರವರ ಪರ ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ.  ಒಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**